ಅವನಿಗೆ ಅರ್ಥವಾಗಲಿಲ್ಲ. 'ಎಲಾ ಇವಳಾ! ಮನುಷ್ಯನಾಗಿ ಹುಟ್ಟಿರೋದೇ ಚಿಂತಿಸೋಕೆ ಅಂತ ಹೊಸ ತತ್ತ್ವಶಾಸ್ತ್ರ ಏನಾದರೂ ಬರೀತಿದ್ದಾಳಾ' ಅನ್ನಿಸಿತು.

'ಚಿಂತೆ ಇರಲೇಬೇಕುರೀ... ಮಕ್ಕಳ ವಿಚಾರ, ಗಂಡನ ವಿಚಾರ, ಅತ್ತೆ ಮಾವನ ವಿಚಾರ... ಅಲ್ಲಾರೀ ಸಂಸಾರ ಅಂದ್ರೆ ಇದೇ ಅಲ್ವಾ?' ತಿಳಿಯದವಳಂತೆ ಪ್ರಶ್ನೆ. ಅದು ಪ್ರಶ್ನೆಯೋ, ಉತ್ತರವೋ, ಸಿದ್ಧಾಂತವೋ ಅವಳಿಗೇ ತಿಳಿಯಬೇಕು.

'ಇರಲಿ ಕಣೇ. ನೋಡು. ಒಂದುವೇಳೆ ನಾಳೆ ನಿನ್ನ ಮಗಳು ಯಾರನ್ನಾದ್ರೂ ಮದುವೆಯಾಗಿ ಬಂದು ಮುಂದೆ ನಿಲ್ತಾಳೆ ಅಂತ ಇಟ್ಟುಕೋ. ಆಗ ಏನೇ ಗತಿ? ನಿನ್ನ ಮಗ ಯಾರನ್ನಾದರೂ ಕರಕೊಂಡು ಬಂದು ಇವಳೇ ನಿನ್ನ ಸೊಸೆ ಅಂದ್ರೆ ಏನೇ ಮಾಡೋದು?' ಸುಂದರಂ ಪೂರಾ ತಲೆ ಕೆಟ್ಟ ಸ್ಥಿತಿಯಲ್ಲಿ ಕೇಳಿದ. ಅವನು ಕೇಳಿದ ರೀತಿ ಹೇಗಿತ್ತು ಅಂದರೆ ಎಷ್ಟೋ ದಿನದಿಂದ ಸಿಡಿಯದ ಬಾಂಬ್ ಒಂದನ್ನು ಸಿಡಿಸಿ ನಿರಾಳವಾದಂತೆ ಇತ್ತು.

ಸುಮತಿ ಅಷ್ಟೇ ಶಾಂತವಾಗಿ ಹೇಳಿದಳು 'ಹಾಗೇನಾದ್ರೂ ಅವರು ಮಾಡಿದ್ರೆ... ನೀವು ಜವಾಬ್ದಾರಿ ಅರಿತವರು. ಸುಖವಾಗಿ ಬಾಳಿ' ಅಂತ ಹೇಳಿ ಅಕ್ಷತೆ ಕಾಳು ಹಾಕಿ ಹೊರಗೆ ಕಳುಹಿಸಿಬಿಡೋದು' ಅವಳ ಧ್ವನಿ ನಿಖರವಾಗಿತ್ತು.

'ಅಂದರೇ...' ಸುಂದರ್ ಕಣ್ಣು ಕಣ್ಣು ಬಿಡುತ್ತಿದ್ದಂತೆಯೇ ಅವಳು 'ಅಷ್ಟೇ ಅಲ್ಲವೇ ಮತ್ತೆ. ಮಕ್ಕಳು ಹುಟ್ಟಿದಾಗ ಅವರ ಓದಿನ ಕುರಿತು ಹೇಗೆ ಜವಾಬ್ದಾರಿ ವಹಿಸುತ್ತೇವೋ ಹಾಗೇನೇ ಮಕ್ಕಳು ವಯಸ್ಸಿಗೆ ಬಂದ ನಂತರ ತಂತಮ್ಮ ಕಾಲಮೇಲೆ ನಿಂತುಕೊಳ್ಳಲಿ ಅಂತ ಕಾದು ನಂತರ ಸರಿಹೊಂದುವ ಜೋಡಿ ನೋಡಿ ಮದುವೆ ಮಾಡೋದು ನಮ್ಮ ಜವಾಬ್ದಾರಿ ಅಂತ ನಾವು ತಿಳಕೊಂಡು ಇರ್ತೀವಿ. ಆದರೆ, ಅದನ್ನೆಲ್ಲ ಅವರೇ ತಿಳಿದುಕೊಂಡು ಒಂದು ಹೆಜ್ಜೆ ಮುಂದುವರಿದರೆ ಏನು ಮಾಡೋದು. ನಿಮ್ಮ ಆಯ್ಕೆ ನಿಮ್ಮದು, ನಿಮ್ಮ ಜೀವನ ನಿಮ್ಮ ಧರ್ಮ ಅಂದು ಆಶೀರ್ವಾದ ಮಾಡಿ ಕಳುಹಿಸೋದು ಅಷ್ಟೆ!' ಅವಳ ಮುಖದಲ್ಲಿ ಮುಗುಳ್ನಗೆ ಆದರೆ ಮಾತು ದಿಟ್ಟವಾಗಿತ್ತು.

'ಅಲ್ಲವೇ... ನೀನು ಹೇಳುವಷ್ಟು ಸುಲಭವೇನೇ ಅದು. ಈಗಿನಿಂದಲೇ ಬಿಗಿ ಮಾಡಬೇಕು ಅಲ್ಲವೇನೇ. ಹಾಗೆ ಹದ್ದು ಮೀರಿ ನಡೆಯುವವರೆಗೂ ಸುಮ್ಮನಿದ್ದು ಆಮೇಲೆ ಅತ್ತರೇನೇ ಬಂತು!!'

'ಅಲ್ಲರೀ ಬಿಗಿ ಮಾಡೋಕೆ ಸಂಬಂಧ ಅಂದ್ರೆ ನಾಯಿ ಕುತ್ತಿಗೆಗೆ ಕಟ್ಟಿರುವ ಚೈನ್ ಅಂದುಕೊಂಡ್ರಾ?' ಹೇಳಿದವಳು ಅವನ ಆತಂಕದ ಮುಖ ನೋಡಿ ಮತ್ತೆ ಹೇಳಿದಳು 'ಜೀವನ, ಸಂಬಂಧ, ಸಂಸಾರ... ಹೀಗೆ ಇದನ್ನೇ ತುಂಬಾ ದೊಡ್ಡ ವಿಚಾರ ಅಂತ ಯೋಚಿಸ್ತ ಕೂತುಕೊಳ್ಳೋದೇ ಅಥವಾ ಸುಖ, ಸಂತೋಷ, ಕರ್ತವ್ಯ ಅಂತ ಅದನ್ನ ಮಾಡ್ತ ಆನಂದ ಅನುಭವಿಸೋದೇ? ಆಯ್ಕೆ ನಮ್ಮದೇ ಅಲ್ವಾ? ಜೀವನ ಅಂದಮೇಲೆ ತಣ್ಣಗಿನ ಗಾಳಿಯೂ ಇರುತ್ತೆ, ಬಿರುಗಾಳಿಯೂ ಇರುತ್ತೆ... ಬಿರುಗಾಳಿಗೆ ಹೆದರಿಕೊಂಡರೆ ತಣ್ಣಗಿನ ಗಾಳಿಯಲ್ಲಿ ಚಳಿ ಜ್ವರ ಬರುತ್ತೆ ಅಷ್ಟೆ' ಮೆದುವಾಗಿ, ದೃಢವಾಗಿ ಹೇಳಿದಳು.

ಸುಂದರ್ ಸ್ವಲ್ಪ ಹೊತ್ತು ಯೋಚಿಸುತ್ತಾ ಕುಳಿತಿದ್ದ. ಅವಳು ಕಾಫಿ ಮಾಡಿಕೊಂಡು ಬಂದಳು. ಬಹಳ ದಿನಗಳ ಮೇಲೆ ಅವನು ಅವಳು ಮಾತನಾಡುತ್ತಾ ಕುಳಿತಿದ್ದರು. ಅವನ ಮನಸ್ಸು ಸಂಪೂರ್ಣ ಶಾಂತವಾಗುತ್ತಿತ್ತು. ಅವನಿಗೆ ಅನ್ನಿಸುತ್ತಿತ್ತು ಅವಳೇ ಅವನ ಶಾಂತಸಾಗರ ಅಂತ. ಅವಳ ಕಟ್ಟುನಿಟ್ಟು, ಶಿಸ್ತು ಸಂಯಮ ಏನೇ ಇದ್ದರೂ ಅವನ ಚಿಂತೆ ಅಂತೂ ದೂರವಾಗೋದು ಖಚಿತ. ಕಾಫಿ ಕುಡಿದು ಅವಳ ಮಡಿಲಲ್ಲಿ ತಲೆಯಿಟ್ಟು ಮಲಗಿದ. ಬಹಳ ಆಪ್ಯಾಯಮಾನವೆನಿಸಿತ್ತು. ಅವನ ಕೂದಲನ್ನು ಸವರುತ್ತಾ ಸಾಂತ್ವನ ಎಂಬಂತೆ ಕುಳಿತಿದ್ದಳು.